

ಮಣಿಪುರಿ ಭಾಷಾ ಕಥೆಗಾರ್ತಿ ಸೋನಿಯಾ ಕುಂದ್ರಕ್‌ಪಮ್ ಇಂಫಾಲದ ಕೊಂಗ್ಬಾಖೇತ್ರಿ ಲೇಖೈ(ಜನನ: 1988)ನವರು. ಅವರ ಮಾತೃಭಾಷೆ ಮೈತೇಯಿಯನ್ನು ಮಣಿಪುರಿ ಭಾಷೆ ಎಂದೇ ಗುರುತಿಸಲಾಗುತ್ತದೆ. ಮೈತೇಯಿ ಸಮುದಾಯದವರು ಮಾತನಾಡುವ ಈ ಭಾಷೆ ಮಣಿಪುರದ ಆಡಳಿತ ಭಾಷೆಯೂ ಹೌದು. ಕಥೆಗಳನ್ನು ಬರೆಯಲು ಪ್ರಯತ್ನಿಸಿದ ನಂತರ ಅವರು ಬರೆದುದು 'ಮಹೌಸಗುಮ್' ಮತ್ತು 'ಲೊಯುಂಬಾ' ಎಂಬ ಕಾದಂಬರಿಗಳನ್ನು. 'ಲೊಯುಂಬಾ' ಸಮಕಾಲೀನ ಮಣಿಪುರಿ ಭಾಷೆಯ ಪ್ರಮುಖ ಕಾದಂಬರಿ ಎಂದು ಗುರುತಿಸಿಕೊಂಡಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪಡೆದಿದೆ.

ಸಾಹಿತ್ಯ ಕ್ಷೇತ್ರವನ್ನು ವಿಮರ್ಶಾತ್ಮಕವಾಗಿ ಗಮನಿಸಲು ಪ್ರಯತ್ನಿಸುತ್ತೇನೆ.

**4** ಮಾತೃಭಾಷೆಯನ್ನು ಅಭಿವೃದ್ಧಿಪಡಿಸಬೇಕು ಎಂಬುದು ಒಂದು ಸಾರ್ವಕಾಲಿಕ ಸತ್ಯ. ನನಗಂತೂ ನನ್ನ ಮಾತೃಭಾಷೆಯು ದೇಶದಾದ್ಯಂತ ಪರಿಚಯಗೊಳ್ಳಬೇಕು ಎಂಬ ಆಸೆಯಿದೆ. ಅದಕ್ಕೆಂದೇ ನಾನು ಮಣಿಪುರಿ ಭಾಷೆಯಲ್ಲಿಯೇ ಕಾದಂಬರಿ ಮತ್ತು ಕಾವ್ಯ ಬರೆಯಬೇಕು ಎಂದುಕೊಂಡಿರುವೆ.

**5** ಸಾಹಿತ್ಯವು ಸಮಾಜದ ಮೇಲೆ ಭಾಗಶಃ ಪ್ರಭಾವ ಬೀರುತ್ತದೆ ಎನ್ನಿಸುತ್ತದೆ.

**6** ಕನ್ನಡ ಭಾಷೆಯ ಬಗ್ಗೆ ನನಗೇನೂ ಗೊತ್ತಿಲ್ಲ.

**7** ನನ್ನ ಮಾತೃಭಾಷೆ ಮಣಿಪುರಿಯಲ್ಲಿ ಬರೆಯಲು ಸಾಧ್ಯವಾಗಿದ್ದು ನನ್ನ ಭಾಗ್ಯವೆಂದು ಭಾವಿಸುವೆ. ಭಾರತದ ಆಸ್ತಿಕರು, ಸಂಸ್ಕೃತವನ್ನು ದೇವಭಾಷೆಯೆಂದು ಪರಿಗಣಿಸುತ್ತಾರೆ. ಭಾರತದ ಅನೇಕ ಭಾಷೆಗಳ ಮೂಲ ಸಂಸ್ಕೃತ ಎನ್ನುತ್ತಾರೆ. ಆದರೆ ಮಣಿಪುರಿ (ಮೈತೇಯಿ) ಭಾಷೆಯು ಸ್ವತಂತ್ರವಾಗಿ ರೂಪುಗೊಂಡ ಭಾಷೆ. ಅದು ಇತರ ಭಾರತೀಯ ಭಾಷೆಗಳಿಗಿಂತ ಭಿನ್ನವಾಗಿದೆ ಎಂದು ಕೇಳಿಬಲ್ಲೆ.

**8** ಬರಹಗಾರರ ಆದ್ಯತೆ ಅಥವಾ ಸಾಹಿತ್ಯ ಸಂದರ್ಭಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಲಾರೆ. ಸಾಹಿತ್ಯಕ್ಕೆ ಸಾಕಷ್ಟು ಪ್ರೋತ್ಸಾಹವಿದೆ ಎಂದಷ್ಟೇ ಹೇಳಬಲ್ಲೆ.

●